# ಶತಮಾನದ ಕಸೂತಿ ಸೆರಗು

ಭಾರತದ ಸಾಂಪ್ರದಾಯಿಕ ಕಲೆ ಕಸೂತಿ ಇಂದಿನ ಸ್ಪರ್ಧಾ ಯುಗದಲ್ಲೂ ಸಹ ತನ್ನದೇ ಆದ ವೈಶಿಷ್ಟ್ಯ ಹೊಂದಿದೆ. ಹುಬ್ಬಳ್ಳಿಯ ರಾಜಾಜಿನಗರ ನಿವಾಸಿ 80 ವರ್ಷದ ಪ್ರಮೀಳಾಬಾಯಿ ಗುರುನಾಥ ದೇಶಪಾಂಡೆಯವರ ಮನೆಯಲ್ಲಿ 110 ವರ್ಷ ಹಳೆಯದಾದ ಸುಂದರ ಕಸೂತಿ ಕಲೆಯುಳ್ಳ ಸೀರೆಯ ಸೆರಗನ್ನು ಸುರಕ್ಷಿತವಾಗಿ ಇರಿಸಿಕೊಂಡಿದ್ದಾರೆ. ಇದು ಅವರ ಅಜ್ಜಿ ಮೂಲತಃ ಹಾನಗಲ್ಲ ತಾಲ್ಲೂಕು ಅಕ್ಕಿಆಲೂರಿನ ನಿವಾಸಿಯಾಗಿದ್ದ ದಿವಂಗತ ಬೃಂದಾ ಅನಂತ ಜೋಶಿಯವರು ತಮ್ಮ ಕರಗಳಿಂದ ಬಿಡಿಸಿದ ಸುಂದರ ಕಸೂತಿ ಕಲೆ. 18 ಮೊಳದ (9 ವಾರದ) ಸೀರೆಯ ಸೆರಗು ಇದಾಗಿದ್ದು ಈ ಸೀರೆಗೆ ಟೋಪು ಸೆರಗಿನ ಸೀರೆಯೆಂದೂ ಕರೆಯುತ್ತಾರೆ.

**-ಮಾಲತೇಶ ಎಂ. ಹುಬ್ಬಳ್ಳಿ, ಧಾರವಾಡ**





# ಲೇಹ್‌ನ ಗುರುದ್ವಾರ

ಲೇಹ್‌ನಿಂದ ಶ್ರೀನಗರಕ್ಕೆ ಹೋಗುವ ಹೆದ್ದಾರಿಯಲ್ಲಿ 23 ಕಿ.ಮೀ. ಕ್ರಮಿಸಿದರೆ ಪತ್ತರ್ ಸಾಹೇಬ್ ಗುರುದ್ವಾರವೊಂದು ಇದೆ. ಭಾರತೀಯ ಸೈನ್ಯದವರೇ ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವ ಈ ಕ್ಷೇತ್ರಕ್ಕೆ ಹೆದ್ದಾರಿಯಲ್ಲಿ ಓಡಾಡುವ ಎಲ್ಲಾ ಪ್ರವಾಸಿಗರೂ ಭೇಟಿ ಕೊಡುತ್ತಾರೆ. ವಿಶೇಷವೆಂದರೆ ಪ್ರತಿನಿತ್ಯ ಇಲ್ಲಿ ಮಧ್ಯಾಹ್ನ ಎಲ್ಲರಿಗೂ ಊಟದ ವ್ಯವಸ್ಥೆ ಇದೆ. ಊಟದ ನಂತರ ಚಹಾ ಕೂಡ. ನೀರು ಉಣಿಸಲು ಅವರೇ ಅಭಿವೃದ್ಧಿಪಡಿಸಿದ ವ್ಯವಸ್ಥೆ ಕೂಡ ಇಲ್ಲಿದೆ. ಮಿಲಿಟರಿಯ ಶಿಸ್ತು ನೋಡಲು ಇಲ್ಲಿಗೆ ಭೇಟಿ ನೀಡಲೇ ಬೇಕು. ಎಲ್ಲ ಮಿಲಿಟರಿ ವಾಹನಗಳು ಇಲ್ಲಿ ನಿಲ್ಲಿಸಿ ಪ್ರಸಾದ ಸ್ವೀಕರಿಸಿ ನಂತರವೇ ಮುಂದೆ ಸಾಗುವುದು.

**-ರಾ.ಲ. ಜಗದೀಶ, ಮಂಡ್ಯ**

# ಶಿಲ್ಪಗಳಲ್ಲಿ ಗಣೇಶನ ಜನ್ಮವೃತ್ತಾಂತ

ಪುರಾಣ ಪುಣ್ಯ ಕತೆಗಳಲ್ಲಿ ಬಿಂಬಿಸುವಂತೆ ಪಾರ್ವತಿಯು ಬೆವರಿನಿಂದ ಮಾಡಿದ ಮೂರ್ತಿಗೆ ಜೀವ ತುಂಬಿರುವ ಘಟನೆಯನ್ನು ತಿಳಿದಿದ್ದೇವೆ. ಅದೇ ಕಥಾನಕವನ್ನು ಬಿಂಬಿಸುವ ನಿಟ್ಟಿನಲ್ಲಿ ಇಡಗುಂಜಿಯ ವಿನಾಯಕವನದಲ್ಲಿ ತದ್ರೂಪಿ ಶಿಲ್ಪಕಲಾ ಕೃತಿಗಳನ್ನು ರಚಿಸಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಇಡಗುಂಜಿ ಕ್ರಾಸ್ ಬಳಿ ಈ ವನವಿದೆ.

**-ಬಳಕೂರು ವಿ.ಎಸ್.ನಾಯಕ, ಬೆಂಗಳೂರು**

